ಆ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಆರೋಗ್ಯ ಇಲಾಖೆಯ ಟಾಸ್ಕ್‌ಫೋರ್ಸ್ ಮಧ್ಯಂತರ ವರದಿಯಲ್ಲಿ ಈ ಸಂಬಂಧವಾಗಿ ಕೊಂಚ ನಮೂದಿಸಲಾಗಿದೆ.

ಆ) ಕೆಲವು ಸರಣಿಗಳೂ ಸ್ವೀಕೃತವಾಗಿದ್ದು ಅವುಗಳನ್ನು ಪರಿಶೀಲಿಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಗ್ರಾಮಾಂತರ ಶಾಲೆಗಳಲ್ಲಿ ಉರ್ದು ಶಿಕ್ಷಕರ ಕೊರತೆ

726(814) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ. (ತುರುವೇಕೆರೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಗ್ರಾಮಾಂತರದಲ್ಲಿ 10 ಶಾಲೆಗಳಿದ್ದು ಕಳೆದ ಹಲವಾರು ವರ್ಷಗಳಿಂದ ಉರ್ದು ಶಿಕ್ಷಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಉರ್ದು ಶಿಕ್ಷಕರನ್ನು ಇದುವರೆಗೂ ನೇಮಕಾತಿ ಮಾಡದಿರಲು ಕಾರಣಗಳೇನು?

ಇ) ಇನ್ನು ಎಷ್ಟು ದಿನಗಳಲ್ಲಿ ಉರ್ದು ಶಿಕ್ಷಕರ ನೇಮಕಾತಿ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು);

ಅ) ಬಂದಿದೆ

ಆ) ತುರುವೇಕೆರೆ ತಾಲ್ಲೂಕಿನ ಗ್ರಾಮಾಂತರದ 8 ಶಾಲೆಗಳಲ್ಲಿ 10 ಶಿಕ್ಷಕರ ಕೊರತೆ ಇದ್ದು, ಅಗತ್ಯವಿದ್ದಡೆ ನಿಯೋಜನೆ ಮೇಲೆ ಭರ್ತಿ ಮಾಡಲಾಗಿದೆ. ಖಾಲಿ ಇರುವ ಎಲ್ಲಾ ಉರ್ದು ಶಿಕ್ಷಕರ (ಹುದ್ದೆಗಳನ್ನು ಮುಂದಿನ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಭರ್ತಿ ಮಾಡಲಾಗುವುದು.

ತುರುವೇಕೆರೆ ತಾಲ್ಲೂಕು ತಾಳಕೆರೆ ಟಿ.ಸುಬ್ರಹ್ಮಣ್ಯ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ

728 (816) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ತಾಳಕೆರೆ ಗ್ರಾಮ ವಾಸಿ ಮಾಜಿ ಸಚಿವರ ಹೆಸರಿನಲ್ಲಿ ತಾಳಕೆರೆ ಗ್ರಾಮದಲ್ಲಿ ಆರೋಗ್ಯ ಕೇಂದ್ರ ಪ್ರಾರಂಭ ಆದದ್ದು ಯಾವಾಗ?

ಆ) ಈ ಆಸ್ಪತ್ರೆಗಳ ಸೌಲಭ್ಯಗಳೇನು? ವೈದ್ಯರು ಹಾಗೂ ಸಿಬ್ಬಂದಿ ಎಲ್ಲಿ ಕೆಲಸ ಮಾಡುತ್ತಿದ್ದಾರೆ?

ಇ) ಮುಖ್ಯ ಮಂತ್ರಿಯವರು ಉದ್ಘಾಟನೆ ಮಾಡಿದ ಆಸ್ಪತ್ರೆಯ ಸ್ಥಿತಿಗತಿ ಏನು?

ಈ) ಈ ಆಸ್ಪತ್ರೆಗೆ ಸರ್ಕಾರಿ ಕಟ್ಟಡ ಈ ವರ್ಷ ಕಲ್ಪಿಸಲಾಗುವುದೇ?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1997ರಲ್ಲಿ ತುರುವೇಕೆರೆ ತಾ. ತಾಳಕೆರೆ ಗ್ರಾಮಕ್ಕೆ ಪ್ರಾ. ಆ. ಕೇಂದ್ರ ಮಂಜೂರು ಮಾಡಲಾಗಿದೆ.

ಆ) ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ಪ್ರಾಥಮಿಕ ಆರೋಗ್ಯ ಕೇಂದ್ರವು ಗ್ರಾಮಪಂಚಾಯತಿಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಈ) ಈ ಬಗ್ಗೆ ಜಿಲ್ಲಾ ಪಂಚಾಯತ್ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ರಾಜ್ಯದಲ್ಲಿರುವ ಅಪೂರ್ಣ ಶಾಲಾ ಕೊಠಡಿಗಳನ್ನು ಪೂರ್ಣಗೊಳಿಸುವುದು

729 (757) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಎಷ್ಟು ಅಪೂರ್ಣ ನಿರ್ಮಿತ ಶಾಲಾ ಕೊಠಡಿಗಳಿವೆ; ಜಿಲ್ಲಾವಾರು ವಿವರ ನೀಡುವುದು

ಆ) ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು

ಇ) ಈ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ಅಪೂರ್ಣ ಶಾಲಾ ಕೊಠಡಿಗಳನ್ನು ಸಂಖ್ಯೆ 6033, (ಜಿಲ್ಲಾವಾರು ವಿವರ ಲಗತ್ತಿಸಿದೆ.)

ಆ) ಮಾರ್ಚ್ 2001 ರೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಇ) ಇದಕ್ಕಾಗಿ 2000-2001 ನೇ ಸಾಲಿನಲ್ಲಿ ಒಟ್ಟು ರೂ. 32.00ಕೋಟಿಗಳನ್ನು ಒದಗಿಸಲಾಗಿದೆ.

2000 - 2001 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಲಾಗಿದ್ದ 11,000 ಅಪೂರ್ಣ ಕೊಠಡಿಗಳ ಜಿಲ್ಲಾವಾರು ಮಾಹಿತಿ ಹಾಗೂ ಸದರಿ ಕೊಠಡಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಮಾಹಿತಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕೊಠಡಿಗಳಭೌತಿಕ ಗುರಿ (110000)	ಕೊಠಡಿಗಳಭೌತಿಕ ಪ್ರಗತಿ (110000)	ಬಾಕಿ(ಪ್ರಾರಂಭಸದೇ) ಇರುವುದು ಸೇರಿ)
1	2	3	4	5
1.	ಬೆಂಗಳೂರು ಉತ್ತರ	1073	255	818
2.	ಬೆಂಗಳೂರು ದಕ್ಷಿಣ ಜಿಲ್ಲೆ	-	-	-
3.	ಬೆಂಗಳೂರು ಗ್ರಾಮಂತರ ಜಿಲ್ಲೆ	384	67	317
4.	ಚಿತ್ರದುರ್ಗ	138	42	96